ಕರ್ನಾಟಕ ವಿಧಾನ ಸಭೆ

ಬುಧವಾರ, 21ನೇ ಮಾರ್ಚ್ 1984

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆಗೆ ಸಮಾವೇಶ ಗೊಂಡಿತು.

ಅಧ್ಯಕ್ಷರು (ಶ್ರೀ ಡಿ. ಬಿ. ಚಂದ್ರೇಗೌಡ) ಪೀಠವನ್ನು ಅಲಂಕರಿಸಿದ್ದರು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು

ವಿಷಯ :- ಪತ್ರಾಗಾರದ ನಿರ್ದೇಶನಾಲಯದಲ್ಲಿ ಸೇವೆಯಿಂದ ವಜಾ ಮಾಡಲಾದ ನೌಕರರುಗಳು

ಪ್ರ. 588(1006) ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ)* ಮಾನ್ಯ ಶಿಕ್ಷಣ ಮಂತ್ರಿಗಳನ್ನು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯಲ್ಲಿ ಬೇರೆ ಬೇರೆ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದು ನೌಕರರನ್ನು ವಜಾ ಮಾಡಿರುವ ಸಂಖ್ಯೆ ;

ಆ. ವಜಾ ಮಾಡಿರುವ ನೌಕರರು ಸರ್ಕಾರಿ ಸೇವೆಗೆ ಸೇರಲು ನಿಗದಿ ಪಡಿಸಿರುವ ವಯೋಮಿತಿಯನ್ನು ಮೀರಿರುವುದಿಲ್ಲವೆ ;

ಇ. ಹಾಗಿದ್ದರೆ ಅವರ ಮರುನೇಮಕಾತಿ ಬಗ್ಗೆ, ಸರ್ಕಾರ ಶೀಘ್ರ ಕ್ರಮ ತೆಗೆದುಕೊಳ್ಳುವುದೆ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಂಸ್ತ್ರಿಗಳು) :—

ಅ. ಇಲ್ಲ.

ಆ. ಪ್ರಶ್ನೆ ಉದ್ಭವಿಸುವುದಿಲ್ಲ.

ಇ. ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ನಿರುದ್ಯೋಗಿಗಳಿಗೆ ಟಿ.ಸಿ.ಹೆಚ್. ತರಬೇತಿ

ಪ್ರ. 589(1028) ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದ ಗುಡ್ಡ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ. ರಾಜ್ಯದಲ್ಲಿ ಟಿ.ಸಿ.ಹೆಚ್. ತರಬೇತಿ ಹೊಂದಿದವರ ಸಂಖ್ಯೆ ಎಷ್ಟು (ಜಿಲ್ಲಾವಾರು ಅಂಕಿ ಅಂಶಗಳನ್ನು ಕೊಡಬೇಕಾಗಿ ವಿನಂತಿ) ;

ಆ. ರಾಜ್ಯದಲ್ಲಿ ಟಿ.ಸಿ.ಹೆಚ್. ತರಬೇತಿ ಹೊಂದಿ ನಿರುದ್ಯೋಗಿಗಳಾಗಿರುವವರ ಸಂಖ್ಯೆ ಎಷ್ಟು ? (ಜಿಲ್ಲಾವಾರು ಅಂಕಿ ಅಂಶ).

ಶ್ರೀ ಬಿ. ರಾಚಯ್ಯ (ಶಿಕ್ಷಣ ಸಚಿವರು) :—

ಅ. ಕಳೆದ 5 ವರ್ಷದಲ್ಲಿ (1979ರಿಂದ 83) ಟಿ.ಸಿ.ಹೆಚ್. ತರಬೇತಿ ಹೊಂದಿರುವವರ ಸಂಖ್ಯೆ. 22,878. (ಜಿಲ್ಲಾವಾರು ಅಂಕಿ ಅಂಶಗಳನ್ನು ಸಂಗ್ರಹಿಸಿ ಒದಗಿಸಲ್ಪಡುವುದು)

ಆ. 25,363 (ಜಿಲ್ಲಾವಾರು ಅಂಕಿ ಅಂಶಗಳು ಅನುಬಂಧ ಅ, ಲಗತ್ತಿಸಿದೆ).

ಮಾನ್ಯ ಸದಸ್ಯರು ಹಾಜರಿರಲಿಲ್ಲ

ಅನುಬಂಧ 'ಅ'

ಕ್ರಮ ಸಂಖ್ಯೆ.	ಜಿಲ್ಲೆಯ ಹೆಸರು	ನಿರುದ್ಯೋಗಸ್ಥ ಟಿ.ಸಿ.ಹೆಚ್. ತರಬೇತಿಗಾರರು ಉದ್ಯೋಗ ವಿನಿಮಯ ಕಛೇರಿಯಲ್ಲಿ ನೊಂದಾಯಿಸಿರುವುದು
1.	ಬೆಂಗಳೂರು ಜಿಲ್ಲೆ	3213
2.	ಕೋಲಾರ ಜಿಲ್ಲೆ	1014
3.	ಶಿವಮೊಗ್ಗ ಜಿಲ್ಲೆ	1801
4.	ತುಮಕೂರು ಜಿಲ್ಲೆ	1588
5.	ಚಿತ್ರದುರ್ಗ ಜಿಲ್ಲೆ	1112
6.	ಮೈಸೂರು ಜಿಲ್ಲೆ	1620
7.	ಕೊಡಗು ಜಿಲ್ಲೆ	0355
8.	ಮಂಡ್ಯ ಜಿಲ್ಲೆ	0652
9.	ಚಿಕ್ಕಮಗಳೂರು ಜಿಲ್ಲೆ	0830
10.	ದಕ್ಷಿಣ ಕನ್ನಡ ಜಿಲ್ಲೆ	1454
11.	ಹಾಸನ ಜಿಲ್ಲೆ	0914
12.	ಬೆಳಗಾಂ ಜಿಲ್ಲೆ	1632
13.	ಬಿಜಾಪುರ ಜಿಲ್ಲೆ	2553
14.	ಧಾರವಾಡ ಜಿಲ್ಲೆ	1311
15.	ಕಾರವಾರ ಜಿಲ್ಲೆ	0950
16.	ಗುಲ್ಬರ್ಗ ಜಿಲ್ಲೆ	1362
17.	ರಾಯಚೂರು ಜಿಲ್ಲೆ	1207
18.	ಬಳ್ಳಾರಿ ಜಿಲ್ಲೆ	0983
19.	ಬಿದರ್ ಜಿಲ್ಲೆ	0782
	ಒಟ್ಟು	25,363

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ರಾಜ್ಯದಲ್ಲಿ ಒಟ್ಟು ಎಷ್ಟು ಶಿಕ್ಷಕರ ಹುದ್ದೆ ಖಾಲಿ ಇದೆ ? ಇಂಟರ್ನ್‌ಷಿಪ್ ಎಜುಕೇಷನ್ ಟ್ರೈನಿಂಗ್‌ನಿಂದ ಟಿ. ಸಿ. ಎಚ್. ನವರಿಗೆ ಅನ್ಯಾಯ ವಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಹಾಗಿದ್ದರೆ ಇಂಟರ್ನ್‌ಷಿಪ್ ಎಜುಕೇಷನ್ ಟ್ರೈನಿಂಗ್‌ಕೋರ್ಸನ್ನು ಬಂದ್ ಮಾಡುವ ಆಲೋಚನೆ ಸರ್ಕಾರಕ್ಕಿದೆಯೆ ?

ಶ್ರೀ ಬಿ. ರಾಚಯ್ಯ.—ಮೊದಲನೆ ಪ್ರಶ್ನೆಗೆ ಉತ್ತರವಾಗಿ, ನರ್ಸರಿ ಟೀಚರ್ಸ್ ಟ್ರೈನಿಂಗ್ ಸೆಂಟರ್ಸ್ 30 ಇದೆ. ಟಿ.ಸಿ.ಎಚ್. ಸೆಂಟರ್ಸ್ 93 ಇದೆ. ಆದರಲ್ಲಿ ಎಜುಕೇಷನ್ ಸಬ್ಜೆಕ್ಟ್ ಟಿ.ಸಿ.ಎಚ್‌ಗೆ ಸಮ ಎಂದು ತಿಳಿದುಕೊಂಡು ಬಹಳ ಜನ ಎಜುಕೇಷನ್ ಸಬ್ಜೆಕ್ಟ್ ಕೊಡಿ ಎಂದು ಕೇಳುತ್ತಿದ್ದಾರೆ. ಆದರೆ ಅದು ಟಿ. ಸಿ. ಎಚ್‌ಗೆ ಸಮ ಅಲ್ಲ. ಆ ದೃಷ್ಟಿಯಿಂದ ಮುಂದೆ ಅದನ್ನು ರದ್ದು ಮಾಡುವುದಕ್ಕೆ ಯೋಚನೆ ಮಾಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.—ಟಿ. ಸಿ. ವಿಚ್. ತರಬೇತಿ ಹೊಂದಿದವರಿಗೆ ನೌಕರಿ ಕೊಡುವಾಗ ಪ್ರಾಶಸ್ತ್ಯ ಕೊಡುತ್ತೀರಾ ?

ಶ್ರೀ ಬಿ, ರಾಚಯ್ಯ.—ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕ ಮಾಡುವಾಗಲೇ ಅವರಿಗೆ ಆದ್ಯತೆ ಕೊಡುತ್ತಿದ್ದೇವೆ.

ಅಧ್ಯಕ್ಷರು.—ಪ್ರತಾಪಚಂದ್ರಶೆಟ್ಟರೇ, ತಮ್ಮ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಸಮಯ ಬೇಕು ಎಂದು ಕೇಳಿದ್ದಾರೆ. ಆದ್ದರಿಂದ ಇದನ್ನು ಮುಂದಕ್ಕೆ ಹಾಕಿದ್ದೇನೆ.

ಪ್ರಶ್ನೆ ಸಂಖ್ಯೆ.—591 (1093)
ಸದಸ್ಯರು ಹಾಜರಿರಲಿಲ್ಲ.
ಪ್ರಶ್ನೆ ಸಂಖ್ಯೆ.—592 (1114)
ಸದಸ್ಯರು ಹಾಜರಿರಲಿಲ್ಲ.
ಪ್ರಶ್ನೆ ಸಂಖ್ಯೆ.—593 (1233)
ಸದಸ್ಯರು ಹಾಜರಿರಲಿಲ್ಲ.

ವಿಷಯ :—ಚಪ್ಪೆರೋಗದಿಂದ ಕುರಿಗಳ ಸಾವು

ಪ್ರ. ಸಂಖ್ಯೆ 591 (1093) ಶ್ರೀ. ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ)*.—ಮಾನ್ಯ ಸಂಗೋಪನಾ ಪಶು ವೈದ್ಯ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ

ಅ. ಕರ್ನಾಟಕ ರಾಜ್ಯದಲ್ಲಿ ಮೈಲಿ ಬೇನೆಯಿಂದ ಕುರಿಗಳು ಸಾಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ :

ಆ. ಕುರಿಗಳಿಗೆ ಸಂಭವಿಸುತ್ತಿರುವ ಸದರಿ ಬೇನೆಯಿಂದ ರಾಜ್ಯದಲ್ಲಿ ಕುರಿಸಾಕಣಿಕೆದಾರರಿಗೆ ಆದ ಕುರಿಗಳ ನಷ್ಟದ ಸಂಖ್ಯೆ ಎಷ್ಟು ಹಾಗೂ ಬೆಲೆ ಎಷ್ಟು :

ಇ. ಪ್ರತಿ ಜಿಲ್ಲೆಯಲ್ಲಿ ಈ ಬಗ್ಗೆ ಪಶುಸಂಗೋಪನಾ ಇಲಾಖೆಯಲ್ಲಿ ಪ್ರತಿಬಂಧಕ ಚುಚ್ಚುಮದ್ದು ಇಲ್ಲದಿರುವುದು ನಿಜವೆ ;

ಈ. ನಷ್ಟವಾದ ಸಾಕಣಿದಾರರಿಗೆ ಬ್ಯಾಂಕಿನಲ್ಲಿ ತೆಗೆದುಕೊಂಡ ಸಾಲವನ್ನು ಮನ್ನಾ ಮಾಡುವ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮವೇನು ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (ಪಶುಸಂಗೋಪನ, ಪಶುವೈದ್ಯಕೀಯ, ಹಾಗೂ ತೋಟಗಾರಿಕೆ ಸಚಿವರು):—

ಅ. ಬಂದಿದೆ.

ಆ. ಏಪ್ರಿಲ್ 1983 ರಿಂದ ಡಿಸೆಂಬರ್ 1983ರ ವರೆಗೆ ಮೈಲಿಬೇನೆಯಿಂದ ಸತ್ತ ಕುರಿಗಳ ಸಂಖ್ಯೆ : 74 ಅಂದಾಜು ಬೆಲೆ ರೂ. 14, 800 (ಕುರಿ ಒಂದಕ್ಕೆ 200.00 ರೂ. ಗಳ ಪ್ರಕಾರ)

ಇ. ನಿಜವಲ್ಲ.

ಈ. ಬ್ಯಾಂಕಿನಿಂದ ತೆಗೆದುಕೊಂಡ ಸಾಲವನ್ನು ಮನ್ನಾ ಮಾಡುವ ಬಗ್ಗೆ ಸರ್ಕಾರದ ಮುಂದೆ ಯಾವ ಯೋಚನೆಯೂ ಇಲ್ಲ. ಆದರೆ ಬ್ಯಾಂಕಿನಿಂದ ಸಾಲ ಪಡೆಯುವಾಗ ಸದರಿ ಪ್ರಾಣಿಗಳ ಜೀವವಿಮೆ ಮಾಡಿಸಿರುತ್ತಾರೆ. ಆದ್ದರಿಂದ, ಅನುಭವದಾರರಿಗೆ ಆರ್ಥಿಕ ತೊಂದರೆ ಯಾಗುವುದಿಲ್ಲ.

ವಿಷಯ :—ಆಫಜಲ್‌ಪುರ ಟೌನಿನಲ್ಲಿ ಕಿರಿಯ ತಾಂತ್ರಿಕ ಕಾಲೇಜನ್ನು ಪ್ರಾರಂಭಿಸುವುದು

ಪ್ರ. ಸಂಖ್ಯೆ 592 (1114) ಶ್ರೀ ಬಸವರಾಜ ಪಾಟೀಲ್ (ಹುಮನಾಬಾದ್)* ಮಾನ್ಯ ಶಿಕ್ಷಣಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ. ಆಫಜಲ್‌ಪುರ ನಗರದಲ್ಲಿ ಕಿರಿಯ ತಾಂತ್ರಿಕ ವಿದ್ಯಾಲಯ ಪ್ರಾರಂಭಿಸಲು ಖಾಸಗಿ ಸಂಸ್ಥೆಯವರು ಮುಂದೆ ಬಂದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ;

---

* ಮಾನ್ಯ ಸದಸ್ಯರು ಹಾಜರಿರಲಿಲ್ಲ